**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 5125/2023

**ಸಿ ಡಬ್ಲ್ಯೂ** 19
**ಪಿ ಡಬ್ಲ್ಯೂಃ** 10

**ಸಾಕ್ಷಿಯ ಹೆಸರು -** **ಶಿವುಕುಮಾರ ನಾಯ್ಕ**
**ತಂದೆಯ ಹೆಸರು -** **ಕೆ ವೆಂಕಾ ನಾಯ್ಕ**
**ವಯಸ್ಸು -** 35 **ವರ್ಷಗಳು**
**ಉದ್ಯೋಗ -** **ಪಿಎಸ್ಐ ಬಡಾವಣೆ ಪೋಲಿಸ್ ಠಾಣೆ**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 09-01-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **23-08-2023** ರಿಂದ **15-02-2025** ರವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **23-08-2023** ರಂದು ಪ್ರಕರಣದ ಕಡತವನ್ನು ಪಿ.ಎಸ್.ಐ ಹನುಮಂತಪ್ಪರವರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ. ದಿಃ **15-09-2023** ರಂದು ಎಫ್.ಎಸ್.ಎಲ್ ವರದಿಯನ್ನು ಎಫಎಲ್ ಎಂ ಎಸ್ ಎಂಬ ಪೋರ್ಟ್ ಲ್ ನಲ್ಲಿ ಡೌನ್ ಲೋಡ್ ಮಾಡಿ ಕಡಕ್ಕೆ ಅಳವಡಿಸಿರುತೆತೇನೆ. ಸದರಿ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **7** ಎಂದು ಗುರುತಿಸಲಾಯಿತು.

ದಿಃ **03-10-2023** ರಂದು ಚಾಸಾ **-17** ರವರಿಂದ ಎಫ.ಎಸ್.ಎಲ್ ಗೆ ಕಳುಹಿಸಿದ್ದ ಮುದ್ದೆಮಾಲನ್ನು ಪಡೆದಿರುತ್ತೇನೆ. ಸದರಿ ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ **-1** ಎಂದು ಗುರುತಿಸಲಾಗಿದೆ.

ದಿಃ **09-10-2023** ರಂದು ಪ್ರಕರಣದ ತನಿಖೆ ಮುಕ್ತಾಯಗೊಳಿಸಿ ಅಂತಮ ವರದಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಆರ್.ಪಿ ವಕೀಲರಿಂದ</u>**

ಈ ಪ್ರಕರಣದಲ್ಲಿ ನನ್ನನ್ನು ಹೋರತುಪಡಿಸಿ ಬೇರೆ ತನಿಖಾಧಿರಿಗಳು ಸಹ ಇರುತ್ತಾರೆ ಅಂದರೆ ಸರಿ. ನಾನು ಸದರಿ ತನಿಖಾಧಿಕಾರಿಗಳು ಮಾಡಿದ್ದ ತನಿಖೆಗೆ ಸಂಬಂಧಿಸಿ ಇರುವ ದಾಖಲೆಗಳನ್ನು ಪರಿಶೀಲಿಸಿ ಅಂತಿಮ ವರದಿ ಸಲ್ಲಿಸಿರುತ್ತೇನೆ ಅಂದರೆ ಸರಿ. ನಾನು ಮೊದಲಿನ ತನಿಖಾಧಿಕಾರಿಗಳು ನೀಡಿರುವ ವರದಿ ಬಗ್ಗೆ ತನಖೆ ಮಾಡಿರುತ್ತೇನೆ. ನಾನು ಆ ಬಗ್ಗೆ ಅಂತಮ ವರದಿಯಲ್ಲಿ ನನ್ನ ಹೇಳಿಕೆಯನ್ನು ನಮೂದಸಿಕೊಂಡಿಲ್ಲ. ಮೊದಲಿನ ತನಿಖಾಧಿಕಾರಿಗಳು ಸುಳ್ಳು ವರದಿಗಳನ್ನು ಸೃಷ್ಟಿ ಮಾಡಿದ್ದರೂ ಸಹ, ನಾನು ಅವುಗಳನ್ನು ಪರಿಶೀಲಿಸದೇ ಅವುಗಳ ಆಧಾರದ ಮೇಲೆ ತನಿಖೆ ಮಾಡಿರುತ್ತೇನೆ ಎಂದು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದ ಕಾರಣ ಪ್ರಕರಣದಲ್ಲಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮೊದಲಿನ ತನಿಖಾಧಿಕಾರಿಗಳು ಆರೋಪಿತರ ತಾಬಾದಿಂದ ಜಪ್ತು ಮಾಡಿದ್ದರೂ ಎನ್ನಲಾದ ಪ್ಲಾಸ್ಟಿಕ್ ಕವರ್ ಗಳನ್ನು ತನಿಖೆ ಕಾಲಕ್ಕೆ ನನಗೆ ಕೊಟ್ಟಿದ್ದರು. ಸದರಿ ಪ್ಲಾಸ್ಟಿಕ್ ಕವರ್ ಗಳನ್ನು ನ್ಯಾಯಾಲಕ್ಕೆ ಹಾಜರು ಪಡಿಸಿರುತ್ತೇನೆ.

ಯಾವುದೇ ಘಟನೆ ನಡೆಯದಿದ್ದರೂ ಠಾಣೆಯ ಅಂಕಿ ಅಂಶಗಳಿಗಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಒತ್ತಡದಿಂದ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.